**ದಿನಾಂಕ 03.11.2022ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಎ.ಜಿ.ಎಸ್.ರವರಿಂದಃ-**

**2. ಮೃತ ಪವಿತ್ರಾಕುಮಾರಿ ಏನು ವ್ಯವಹಾರ ಮಾಡುತ್ತಿದ್ದಳು ಎನ್ನುವುದು ನನಗೆ ಖುದ್ದಾಗಿ ಗೊತ್ತಿಲ್ಲ. ಆಕೆ ಯಾರ ಕಡೆ ಹಣದ ವ್ಯವಹಾರ ಮಾಡಿದ್ದಳು ಎನ್ನುವುದು ಕೂಡ ಖುದ್ದಾಗಿ ಗೊತ್ತಿಲ್ಲ. ಈ ಪ್ರಕರಣದಲ್ಲಿ ನನಗೆ ಪೂರಾ ವಿವಾರಗಳು ಗೊತ್ತಿಲ್ಲ. ಮೃತ ಪವಿತ್ರಾಕುಮಾರಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನಾನು ಕೂಡ ಹೋಗಿದ್ದೆ. ಬೇರೆ ವಿಚಾರ ಗೊತ್ತಿಲ್ಲ. ಪೊಲೀಸರು ಒಂದು ದಾಖಲೆಗೆ ನನ್ನ ರುಜು ಪಡೆದಿದ್ದರು. ಅದು ಯಾವ ದಾಖಲೆ ಎಂದು ನನಗೆ ಗೊತ್ತಿಲ್ಲ. ನನಗೆ ಯಾವುದೇ ವಿಚಾರಗಳು ತಿಳಿದಿಲ್ಲದಿದ್ದರೂ ಸಹ ಪೊಲೀಸರು ಹೇಳಿದಂತೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೆಸ್ಲಿ ರಸ್ತೆ ಮತ್ತು ಪುಲಕೇಶಿ ರಸ್ತೆ ಎರಡೂ ಬೇರೆ ಬೇರೆ ಇರುತ್ತವೆ. ಮೃತಳು ವಾಸ ಇದ್ದ ಮನೆ ವೆಸ್ಲಿ ರಸ್ತೆಯಲ್ಲಿತ್ತು. ನನ್ನ ಮನೆಯ ಅಕ್ಕಪಕ್ಕದಲ್ಲಿ ಸುಂದರ ರಾಜ್ ಮತ್ತು ರಶೀದ್ ಎನ್ನುವವರು ವಾಸ ಇದ್ದಾರೆ.**

**ಮರು ವಿಚಾರಣೆಃ ಇಲ್ಲ**

*ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.*

**ಓ ಹೇ ಕೇ ಸ ಇ ಎ ಒ.,**

**03.11.2022.**
**(ಎಂ.ಎಲ್. ರಘುನಾಥ್)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಮೈಸೂರು.**